ರಾಜ್ಯದಲ್ಲಿ ಅತಿವೃಷ್ಟಿಯಿಂದ ದುಸ್ಥಿತಿಗೊಳಗಾದ ಕೆರೆಗಳು

3198 - ಶ್ರೀ ಆಂಜನಾಮೂರ್ತಿ (ನೆಲಮಂಗಲ) : ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಭಾರಿ ಮಳೆಯಿಂದಾಗಿ ಎಷ್ಟು ಕೆರೆಗಳು ದುಸ್ಥಿತಿಗೊಳಗಾಗಿವೆ?*

ಆ) *ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ಯಾವ ತಾಲ್ಲೂಕಿನಲ್ಲಿ ಹೆಚ್ಚಿನ ಕೆರೆಕುಂಟೆಗಳಿಗೆ ಹಾನಿಯಾಗಿದೆ?*

ಇ) *ನೆಲಮಂಗಲ ಮತಕ್ಷೇತ್ರಕ್ಕೆ ಸೇರಿದ ಮಾಗಡಿ ತಾ: ಸೋಲೂರು ಹೋಬಳಿ ದೊಡ್ಡಬಳ್ಳಾಪುರ ತಾ: ಮಧುರೆ ಹೋಬಳಿ ನೆಲಮಂಗಲ ಕಸಬಾ ಹೋಬಳಿಯಲ್ಲಿ ಎಷ್ಟು ಕೆರೆಗಳು ಹಾನಿಗೊಳಗಾಗಿವೆ?*

ಈ) *ಹಾನಿಗೊಳಗಾದ ಕೆರೆಗಳನ್ನು ದುರಸ್ತಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಮತ್ತು ಈ ಕೆರೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ? ಈ ಹೋಬಳಿಗಳ ಕೆರೆಗಳ ದುರಸ್ತಿಗಾಗಿ ನೀಡಲಿರುವ ಹಣದ ಪೂರ್ಣ ವಿವರ ನೀಡುವುದು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಭಾರಿ ಮಳೆಯಿಂದಾಗಿ ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ಒಟ್ಟು 960 ಕೆರೆಗಳು ಹಾನಿಗೊಳಗಾಗಿವೆ.

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ಕನಕಪುರ ಹಾಗೂ ಮಾಗಡಿ ತಾಲ್ಲೂಕುಗಳಲ್ಲಿ ಹೆಚ್ಚಿನ ಕೆರೆ ಕುಂಟೆಗಳು ಹಾನಿಯಾಗಿವೆ.

ಇ) ನೆಲಮಂಗಲ ಕ್ಷೇತ್ರಕ್ಕೆ ಸೇರಿದಂತೆ ಮಾಗಡಿ ತಾ: ಸೋಲೂರು ಹೋಬಳಿಯಲ್ಲಿ 3 ಕೆರೆಗಳು ದೊಡ್ಡಬಳ್ಳಾಪುರ ತಾ. ಮಧುರೆ ಹೋಬಳಿಯಲ್ಲಿ 5 ಕೆರೆಗಳು ಮತ್ತು ನೆಲಮಂಗಳ ಕಸಬಾ ಹೋಬಳಿಯಲ್ಲಿ 6 ಕೆರೆಗಳು ಹಾನಿಗೊಳಗಾಗಿವೆ.

ಈ) ಹಾನಿಗೊಳಗಾದ ಕೆರೆಗಳಲ್ಲಿ ನೀರು ವ್ಯರ್ಥವಾಗದಂತೆ ತಾತ್ಕಾಲಿಕವಾಗಿ ನೀರು ನಿಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ. ಹಾನಿಗೊಳಗಾದ ಕೆರೆಗಳ ತಾತ್ಕಾಲಿಕ ದುರಸ್ತಿಗಾಗಿ ರೂ. 61.45 ಲಕ್ಷಗಳು ಮತ್ತು ಶಾಶ್ವತ ದುರಸ್ತಿಗಾಗಿ ರೂ. 428.60 ಲಕ್ಷಗಳಾಗುತ್ತವೆ.

ಕೊಡಗು ಜಿಲ್ಲೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮದಲ್ಲಿ ಮೃತಪಟ್ಟಿರುವ ಕುಟುಂಬದವರಿಗೆ ಅನುಕಂಪದ ಆಧಾರದಲ್ಲಿ ನೌಕರಿ

3202 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೊಡಗು ಜಿಲ್ಲೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮದಲ್ಲಿ ಕರ್ತವ್ಯ*

ನಿರತರಾಗಿರುವಾಗ ಈವರೆಗೆ (ಕಳೆದ 3 ವರ್ಷಗಳಿಂದ) ಮೃತಪಟ್ಟಿರುವ ನೌಕರರ ಸಂಖ್ಯೆ ಎಷ್ಟು? ಹುದ್ದೆವಾರು ತಾಲ್ಲೂಕುವಾರು ಮಾಹಿತಿ ನೀಡುವುದು?

ಆ) ಮೃತಪಟ್ಟಿರುವ ನೌಕರರ ಕುಟುಂಬದವರು ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಿ ಎಷ್ಟು ಅರ್ಜಿ ಸಲ್ಲಿಸಿರುತ್ತಾರೆ? ವರ್ಷವಾರು ಮಾಹಿತಿ ನೀಡುವುದು?

ಇ) ಅನುಕಂಪದ ಆಧಾರದ ಮೇಲೆ ಇದುವರೆಗೂ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ? ತಾಲ್ಲೂಕುವಾರು ಉದ್ಯೋಗ ಪಡೆದವರ ವಿವರಗಳನ್ನು ನೀಡುವುದು?

ಈ) ಇನ್ನು ಎಷ್ಟು ಅರ್ಜಿಗಳು ಬಾಕಿ ಇವೆ? ಈ ಅರ್ಜಿಗಳ ಬಗ್ಗೆ ಎಂದು ಕ್ರಮ ಕೈಗೊಳ್ಳಲಾಗುವುದು?

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕೊಡಗು ಜಿಲ್ಲೆಯ ಕ.ವಿ.ಪ್ರ.ನಿ.ನಿ.ದಲ್ಲಿ ಕಳೆದ ಮೂರು ವರ್ಷಗಳಿಂದ ಕರ್ತವ್ಯ ನಿರತರಾಗಿದ್ದಾಗ ಮೃತಪಟ್ಟ ನೌಕರರ ಒಟ್ಟು ಸಂಖ್ಯೆ:8. ತಾಲ್ಲೂಕುವಾರು, ಹುದ್ದೆವಾರು ವಿವರಗಳು ಕೆಳಕಂಡಂತಿವೆ.

ತಾಲ್ಲೂಕು	ಹುದ್ದೆ	ಮೃತಪಟ್ಟವರ ಸಂಖ್ಯೆ
1. ಮಡಿಕೇರಿ	ಮೆಕಾನಿಕ್ ದರ್ಜೆ -2	1 ಸಂಖ್ಯೆ
2. -"-	ಮಾರ್ಗದಾಳು	1 "
3. ಸೋಮವಾರಪೇಟೆ	ಮೆಕ್ಯಾನಿಕ್- ದರ್ಜೆ 2	2 "
4. -"-	ಮಾರ್ಗದಾಳು	2 "
5. ವಿರಾಜಪೇಟೆ	ಮಾರ್ಗದಾಳು	2 "

ಆ) ಕೆಳಕಂಡ ಮೃತಪಟ್ಟ ನೌಕರರ ಕುಟುಂಬದವರು ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಿ 4 ಮಂದಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವರ್ಷವಾರು ವಿವರ ಕೆಳಕಂಡಂತಿದೆ.

ತಾಲ್ಲೂಕು	ಮೃತ ನೌಕರರ ಹೆಸರು ಶ್ರೀಯುತರು	ಉದ್ಯೋಗ ಕೋರಿ ಸಂಬಂಧಿಕರು ಅರ್ಜಿ ಸಲ್ಲಿಸಿದ ವರ್ಷ
ಮಡಿಕೇರಿ	1. ಜಿ.ಕೆ. ಕೃಷ್ಣ ಮಾರ್ಗದಾಳು	1997
ಸೋಮವಾರಪೇಟೆ	2. ಹೆಚ್.ಜಿ. ಅಯ್ಯ ಮೆಕ್ಯಾನಿಕ್ ದರ್ಜೆ-2.	1997

ತಾಲ್ಲೂಕು	ಮೃತ ನೌಕರರ ಹೆಸರು ಶ್ರೀಯುತರು	ಉದ್ಯೋಗ ಕೋರಿ ಸಂಬಂಧಿಕರು ಅರ್ಜಿ ಸಲ್ಲಿಸಿದ ವರ್ಷ
ಸೋಮವಾರಪೇಟೆ	3. ಕುನ್ನೀರಯ್ಯ, ಮಾರ್ಗದಾಳು	1997
ವೀರಾಜಪೇಟೆ	4. ಜಿ.ಕೆ. ಶ್ರೀನಿವಾಸ ಮಾರ್ಗದಾಳು	1997

ಇ) ಇದುವರೆವಿಗೆ 4 ಜನರಿಗೆ ಉದ್ಯೋಗ ನೀಡಲಾಗಿದೆ ಉದ್ಯೋಗ ಪಡೆದವರ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ.

ತಾಲ್ಲೂಕು	ಉದ್ಯೋಗ ಪಡೆದವರ ಹೆಸರು	ನೀಡಲಾದ ಹುದ್ದೆ	ಉದ್ಯೋಗ ನಿರ್ವಹಿಸುತ್ತಿರುವ ಸ್ಥಳ
ಮಡಿಕೇರಿ	ಶ್ರೀಮತಿ ಸಿ.ಹೆಚ್. ಸರಸು (ದಿ. ಜಿ.ಕೆ. ಕೃಷ್ಣರವರ ಪತ್ನಿ)	ಸಹಾಯಕಿ	ಮಡಿಕೇರಿ
ಮಡಿಕೇರಿ	ಶ್ರೀಮತಿ ಲಕ್ಷ್ಮಿ (ದಿ. ಜಿ.ಕೆ. ಶ್ರೀನಿವಾಸ ಇವರ ಪತ್ನಿ)	ಕಿರಿಯ ಸಹಾಯಕಿ	ಮಡಿಕೇರಿ
ಸೋಮವಾರ-ಪೇಟೆ	ಶ್ರೀಮತಿ ಮಾಚ್ಚಮ್ಮ (ದಿ. ಹೆಚ್.ಬಿ. ಅಯ್ಯು ಇವರ ಪತ್ನಿ)	ದಫ್ತರಿ	ಪಿರಿಯಾಪಟ್ಟಣ
ವಿರಾಜಪೇಟೆ	ಶ್ರೀ ಮಾದೇಶ್ (ದಿ. ಕುನ್ನೀರಯ್ಯ ಇವರ ಮಗ)	ದಫ್ತರಿ	ವೀರಾಜಪೇಟೆ

ಈ) ಮೃತಪಟ್ಟ 8 ನೌಕರರಲ್ಲಿ, 4 ಜನ ನೌಕರರ ಸಂಬಂಧಿಗಳಿಗೆ ಕೆಲಸ ಕೊಡಲಾಗಿದೆ. 3 ಜನ ಮೃತಪಟ್ಟ ಸಂಬಂಧಿಕರಿಂದ ಉದ್ಯೋಗ ಕೋರಿ ಅರ್ಜಿಗಳು ಬಂದಿರುವುದಿಲ್ಲ. ಅರ್ಜಿಗಳು ಬಂದ ನಂತರ ನಿಯಮಗಳ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಉಳಿದ ಒಬ್ಬರಾದ ದಿವಂಗತ ಶ್ರೀ ಬಸವಶೆಟ್ಟಿ, ಲೈನ್‌ಮನ್‌ರವರ ಪತ್ನಿಯವರಾದ ಶ್ರೀಮತಿ ಟಿ.ಎಂ. ಸೌಭಾಗ್ಯರವರಿಗೆ ಉದ್ಯೋಗವನ್ನು 9.10.98ರಲ್ಲಿ ಕೊಡಲಾಗಿತ್ತು. ಆದರೆ ಸದರೀಯವರು ಅವರ ಬದಲು ಅವರ ಅಪ್ರಾಪ್ತ ವಯಸ್ಕ ಮಗನಿಗೆ ಉದ್ಯೋಗವನ್ನು ನೀಡಲು ಕೋರಿರುವುದರಿಂದ ಅವರ ಮಗ ಪ್ರಾಪ್ತ ವಯಸ್ಕನಾದ ನಂತರ ಅರ್ಜಿ ಸಲ್ಲಿಸುವಂತೆ ದಿನಾಂಕ 7.12.98ರಲ್ಲಿ ಸದರೀ ಶ್ರೀಮತಿ ಟಿ.ಎಂ. ಸೌಭಾಗ್ಯ ರವರಿಗೆ ತಿಳಿಸಲಾಗಿದೆ.